

ಬಿಸಿಲು ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಯುಗಾದಿಯ ಸಿಹಿ-ಕಹಿ

ಕಳೆದ ಶನಿವಾರ ಸಂಜೆ ಯುಗಾದಿ ಚಂದ್ರದರ್ಶನಕ್ಕಾಗಿ ಎಲ್ಲರ ಕಣ್ಣುಗಳು ಪಡುವಣ ದಿಕ್ಕಿನತ್ತ ದಿಟ್ಟಿಸಿದ್ದವು. ಹೊಸ ವರ್ಷದ ಆಗಮನದ ಸಂಕೇತವಾದ 'ನಂದನ' ಸಂವತ್ಸರದ ಬಿದಿಗೆಯ ಚಂದ್ರನ ದರ್ಶನ ಮಾಡುವ ಕಾತರ. ಮಠದ ಮುಂಭಾಗದ ರಸ್ತೆಯ ಬದಿಯಲ್ಲಿ 'ನಾ ಮುಂದು ತಾ ಮುಂದು' ಎಂದು ತುದಿಗಾಲ ಮೇಲೆ ನಿಂತಿದ್ದರು. ಎಲ್ಲರಿಗಿಂತಲೂ ತಾನು ಮೊದಲು ನೋಡಬೇಕೆಂಬ ತವಕ ಅವರ ಕಣ್ಣುಗಳಲ್ಲಿತ್ತು. ಸಂಜೆಯ ನಸುಗೆಂಪಿನಲ್ಲಿ



ಮೋಡಗಳ ಮರೆಯಲ್ಲಿ ಕಣ್ಣುಮುಚ್ಚಾಲೆಯಾಡುತ್ತಿದ್ದ ಬಿದಿಗೆ ಚಂದ್ರ ಕೊನೆಗೂ 'ಸಿಕ್ಕುಬಿದ್ದಾಗ' ಅವರಿಗುಂಟಾದ ಆನಂದಕ್ಕೆ ಪಾರವಿಲ್ಲ. 'ಹೋ' ಎಂದು ಉದ್ಗರಿಸುತ್ತಾ ಕುಣಿದು ಕುಪ್ಪಳಿಸಿ ವಿಜಯೋತ್ಸಾಹ ಆಚರಿಸಿದರು. ಚಂದ್ರ ಕಾಣಿಸದವರಿಗೆ ಸಹಾನುಭೂತಿಯನ್ನು ತೋರಿ ಚಂದ್ರ ಎಲ್ಲಿದ್ದಾನೆ, ಹೇಗಿದ್ದಾನೆ ಎಂದು ತೋರಿಸುವ ತವಕ ಅವರಿಗೆ. ಎದುರಿಗೆ ಕಾಣುವ ಮರದ ಅಥವಾ ವಿದ್ಯುತ್‌ತಂತಿಯ ಮೇಲ್ಭಾಗದಲ್ಲಿ ಎಷ್ಟು ಅಡಿ ಎತ್ತರದಲ್ಲಿದ್ದಾನೆಂದು ಕಣ್ಣುಗಳಿಂದಲೇ ಆಗಸವನ್ನು 'ಸ್ಕ್ಯಾನ್' ಮಾಡಿ ನೀಡುವ ಅವರ ಭಾವಪೂರ್ಣ ವಿವರಣೆ. ಹಕ್ಕಿಪಕ್ಷಿಗಳು ಹಾರಿಬಂದರೆ 'ಅಗೋ ಅಲ್ಲಿ...!' ಎಂದು ಬೆರಳು ಮಾಡಿ ತೋರಿಸುವ ತುಡಿತ. ಚಂದ್ರ ಯಾವ ಕಡೆಗೆ ಹೆಚ್ಚು ವಾಲಿದ್ದಾನೆ ಎಂಬುದರ ಆಧಾರದ ಮೇಲೆ ಹಿರಿಯರಿಂದ ಈ ವರ್ಷದ ಮಳೆ-ಬೆಳೆ, ವ್ಯಾಪಾರ-ವಹಿವಾಟಿನ ಲೆಕ್ಕಾಚಾರ! ಪದ್ಧತಿ ಪ್ರಕಾರ ಚಂದ್ರದರ್ಶನವಾದೊಡನೆ ಗುರುಗಳ ಪಾದಕ್ಕೆ ನಮನ. ಕಾಣಿಕೆ ಸಮರ್ಪಣೆ. ಹೊಸ ಸಂವತ್ಸರದಲ್ಲಿ ಶುಭಾಶೀರ್ವಾದಗಳ ಬೇಡಿಕೆ.

ಯುಗಾದಿ ಹಬ್ಬದ ಈ ಸಂಭ್ರಮದಲ್ಲಿ ಶಿಷ್ಯರ ಮುಖದಲ್ಲಿ ಮೂಡಿದ್ದ ಮಂದಹಾಸವನ್ನು ಸವಿಯುತ್ತಾ ಸಿರಿಗೆರೆಯಿಂದ ದಾವಣಗೆರೆಗೆ ನಮ್ಮ ಪಯಣ. ತ್ರಿಶೂಲ ಸಭಾಂಗಣದಲ್ಲಿ ಶ್ರೀ ಶಂಕರವಾಹಿನಿ ಏರ್ಪಡಿಸಿದ್ದ 'ನಂದಿನಿ ಶ್ರೀಶಂಕರ ಯುಗಾದಿ ಪುರಸ್ಕಾರ-2012' ಸಮಾರಂಭ. ಸಭೆಯನ್ನು ಪ್ರವೇಶಿಸಿದಾಗ ನಾಡಿನ ಹೆಸರಾಂತ ಗಾಯಕರ ಮಧುರ ಕಂಠದಿಂದ ಕೇಳಿಬರುತ್ತಿದ್ದ 'ಗೀತಾಂಜಲಿ' ಸಂಗೀತಸುಧೆಯನ್ನು ಆಸ್ವಾದಿಸುತ್ತಾ ಕುಳಿತಿದ್ದ ಶ್ರೋತೃಗಳು. ಯುಗಾದಿಯಂದು ಆಗಸದಲ್ಲಿ ಒಬ್ಬ ಚಂದ್ರನ ದರ್ಶನವಾದರೆ ಸಭಾಂಗಣದೊಳಗೆ ಸಾಹಿತ್ಯ, ಸಂಗೀತ, ಕಲೆ, ಸಮಾಜಸೇವೆ ಮೊದಲಾದ ಕ್ಷೇತ್ರಗಳಲ್ಲಿ ಮಹತ್ ಸಾಧನೆಯನ್ನು ಮಾಡಿ ಪುರಸ್ಕಾರಕ್ಕೆ ಭಾಜನರಾದ ಹತ್ತಾರು ಚಂದ್ರರ ದರ್ಶನ!

ವೇದಿಕೆಯ ಮೇಲೆ ಆಕರ್ಷಣೀಯವಾದ ದೊಡ್ಡ ಆಸನದ ಮೇಲೆ ನಮ್ಮನ್ನು ಕೂರಿಸಲಾಯಿತು. ಪ್ರಶಸ್ತಿ ವಿಜೇತರು ಅಕ್ಕಪಕ್ಕದ ಆಸನಗಳಲ್ಲಿದ್ದರು. ಪ್ರಶಸ್ತಿ ನೀಡುವ ಸಂದರ್ಭದಲ್ಲಿ ಒಬ್ಬೊಬ್ಬರನ್ನೇ ಕರೆಸಿ ವೇದಿಕೆಯ ಮುಂಭಾಗದ ವಿಶೇಷ ಆಸನದಲ್ಲಿ ಕೂರಿಸಿ ಅವರ ಸಾಧನೆಗಳನ್ನು ವೇದಿಕೆಯ ಹಿಂಭಾಗದಲ್ಲಿ ಮೆಗಾ ಸ್ಕ್ರೀನ್ ಮೇಲೆ ತೋರಿಸಲಾಗುತ್ತಿತ್ತು. ಸಭಾಂಗಣದಲ್ಲಿ ಕುಳಿತಿದ್ದ ಪ್ರೇಕ್ಷಕರು ಅದನ್ನು ಸುಲಭವಾಗಿ ನೋಡಿ ಆನಂದಿಸುತ್ತಿದ್ದರು. ಆದರೆ ವೇದಿಕೆಯ ಮೇಲೆ ಆಸೀನರಾಗಿದ್ದ ಸನ್ಮಾನ್ಯರು ಕಷ್ಟಪಟ್ಟು ಹಿಂದಿರುಗಿ ನೋಡುತ್ತಿದ್ದರು. ದೊಡ್ಡ ಹಾಗೂ ಭಾರವಾದ ಆಸನದಲ್ಲಿದ್ದ ನಮಗೆ ಹಿಂದಿರುಗಿ ನೋಡಲು ಸಾಧ್ಯವಾಗಲೇ ಇಲ್ಲ. ಎಷ್ಟೇ ಪ್ರಯತ್ನಿಸಿದರೂ ಹಿಂದಿನ ಪರದೆ ಕಾಣದೆ ಘನಗಂಭೀರ ಮುಖಮುದ್ರೆ ಹೊತ್ತು ಧ್ವನಿಮುದ್ರಿಕೆಯನ್ನು ಮಾತ್ರ ಕೇಳಬೇಕಾಯಿತು. ಆಗ ನಮ್ಮ ನೆನಪಿಗೆ ಬಂದ ಬಸವಣ್ಣನವರ ವಚನ: 'ಮೇಲಾಗಲೊಲ್ಲೆನು, ಕೀಳಾಗಲಲ್ಲದೆ, ಕೀಳಿಂಗಲ್ಲದೆ ಹಯನ ಕರೆವುದೆ?' ಅಂದರೆ ಹಸುವಿನ ಹಾಲು ಹಿಂಡಿಕೊಳ್ಳಬಯಸುವವರು ಹಸುವಿನ ಕಾಲಬುಡದಲ್ಲಿ ಕುಳಿತುಕೊಳ್ಳಬೇಕು. ಮೇಲೆಂಬ ಹಿರಿಮೆಯಿಂದ ಹಸುವಿನ ಡುಬ್ಬದ ಮೇಲೆ ಕುಳಿತುಕೊಂಡರೆ ಹಸುವಿನ ಹಾಲು ಕರೆಯಲು ಸಾಧ್ಯವೇ? ನಮ್ಮ ಮುಂದೆ ವಿಶೇಷ ಆಸನದಲ್ಲಿ ಕುಳಿತುಕೊಳ್ಳುತ್ತಿದ್ದ ಪ್ರತಿಯೊಬ್ಬ ಸನ್ಮಾನಿತರೂ ಸಹ ಹಿಂತಿರುಗಿ ತಮ್ಮ ಜೀವನದ ಸಾಧನೆಯ ಹಿನ್ನೋಟವನ್ನು ಪರದೆಯ ಮೇಲೆ ವೀಕ್ಷಿಸುತ್ತಿದ್ದರು. ಅವರ ಕಣ್ಣುಗಳಲ್ಲಿ ಒಂದು ವಿಶಿಷ್ಟ ಸಂತೃಪ್ತಿ ಭಾವ ಮಿಂಚುತ್ತಿತ್ತು!

ಪ್ರಶಸ್ತಿವಿಜೇತ ಗಣ್ಯ ವ್ಯಕ್ತಿಗಳಿಗೆ ಪುರಸ್ಕಾರ ಪ್ರದಾನ ಮಾಡಿ ತಡರಾತ್ರಿ ಮಠಕ್ಕೆ ಹಿಂದಿರುಗಿದಾಗ ಬೆಂಗಳೂರಿನಿಂದ ನಮ್ಮ ಆಪ್ತಸಹಾಯಕರಾದ ರಾ ವೆಂಕಟೇಶ ಶೆಟ್ಟಿಯವರಿಂದ ನಮ್ಮ ಮೊಬೈಲ್‌ಗೆ ಬಂದ SMS ನಮ್ಮ ಹೃದಯವನ್ನು ಕಲಕಿತು. ಅದು ವಿಜಯಕರ್ನಾಟಕದ ಕಾರ್ಯಾಲಯದಿಂದ ನಮಗೆ ತಿಳಿಸಲು ಬಯಸಿದ ದಾರುಣ ಸುದ್ದಿ. ಸಂಪಾದಕರಾದ ಇ. ರಾಘವನ್ ರವರು ಹೃದಯಾಘಾತದಿಂದ ನಿಧನರಾದರೆಂಬ ಅನಿರೀಕ್ಷಿತ ಸುದ್ದಿ ಯುಗಾದಿಯ ಸಂತಸದ ಬೆಲ್ಲಕ್ಕೆ ಸಂಕಟದ ಬೇವನ್ನು ಬೆರೆಸಿದಂತಾಗಿತ್ತು. ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದ ಸಂಪಾದಕ ರಾಘವನ್‌ರವರು ನಮಗೆ ಪರಿಚಯವಾಗಿದ್ದು 2010 ರ ಡಿಸೆಂಬರ್‌ನಲ್ಲಿ. ವಿಜಯ ಕರ್ನಾಟಕದ ಹಿಂದಿನ ಸಂಪಾದಕರಾದ ವಿಶ್ವೇಶ್ವರ ಭಟ್ಟರು ನಮ್ಮನ್ನು ಈ **'ಬಿಸಿಲು ಬೆಳದಿಂಗಳು'** ಅಂಕಣವನ್ನು ಬರೆಯಲು ಪ್ರೇರೇಪಿಸಿದವರು. ಅವರು ನಿರ್ಗಮಿಸಿದ ಮೇಲೆ ಕಾರ್ಯಬಾಹುಲ್ಯದಿಂದ ಅಂಕಣ ಬರಹವನ್ನು ನಿಲ್ಲಿಸಿದಾಗ ಹೊಸದಾಗಿ ಸಂಪಾದಕರಾಗಿ ಬಂದ ಇ. ರಾಘವನ್‌ರವರು ಚಿತ್ರದುರ್ಗದ ಸ್ಥಾನಿಕ ಸಂಪಾದಕರ ಮೂಲಕ ಮುಂದುವರಿಸಬೇಕೆಂದು ತುರ್ತುಪತ್ರವನ್ನು

ಕಳುಹಿಸಿದರು. ಅಲ್ಲದೆ ಬೆಂಗಳೂರಿನ ನಮ್ಮ ತರಳಬಾಳು ಕೇಂದ್ರದಲ್ಲಿ ಖುದ್ದಾಗಿ ಕಂಡು ಅಂಕಣವನ್ನು ನಿಲ್ಲಿಸಬಾರದೆಂದು ಒತ್ತಾಯ ತಂದು ಮರುವಾರವೇ ಅದು ಪುನರಾರಂಭವಾಗುವಂತೆ ಮಾಡಿದರು. ಸುಮಾರು ಒಂದು ಘಂಟೆಗೂ ಹೆಚ್ಚು ಕಾಲ ಅವರ ಮತ್ತು ನಮ್ಮ ಮಧ್ಯೆ ನಡೆದ ಅಂದಿನ ಸಂಭಾಷಣೆ ತುಂಬಾ ಆತ್ಮೀಯತೆ ಹಾಗೂ ಸೌಜನ್ಯತೆಯಿಂದ ಕೂಡಿತ್ತು. ಅನೇಕ ಪತ್ರಿಕೆಗಳ ಸಂಪಾದಕರಾಗಿಯೂ ಅವರಲ್ಲಿ ಯಾವ ಹಮ್ಮುಬಿಮ್ಮು ಕಾಣಿಸಲಿಲ್ಲ.

2011 ರ ಸೆಪ್ಟೆಂಬರ್‌ನಲ್ಲಿ ಶಿಕ್ಷಕರ ದಿನಾಚರಣೆಯ ಅಂಗವಾಗಿ 'ಬೋಧಿವೃಕ್ಷ' ಪತ್ರಿಕೆಯು ನೈತಿಕ ಶಿಕ್ಷಣದ ಅಗತ್ಯವನ್ನು ಕುರಿತ ಒಂದು ಸಂವಾದ ಗೊಷ್ಠಿಯನ್ನು ಬೆಂಗಳೂರಿನ ನಮ್ಮ ತರಳಬಾಳು ಕೇಂದ್ರದಲ್ಲಿ ಏರ್ಪಡಿಸಿತ್ತು. ಆ ಗೋಷ್ಠಿಯಲ್ಲಿ ನಮ್ಮ ಜೊತೆಗೆ ಹಿರಿಯ ಸಾಹಿತಿಗಳಾದ ಬನ್ನಂಜೆ ಗೋವಿಂದಾಚಾರ್ಯರು ಮತ್ತು ಅಧ್ಯಾತ್ಮಚಿಂತಕಿಯಾದ ಶ್ರೀಮತಿ ವಿ.ಬಿ ಆರತಿಯವರು ಭಾಗವಹಿಸಿದ್ದರು. ಅಂದಿನ ಸಂವಾದವನ್ನು ನಡೆಸಿದವರು ಪತ್ರಿಕೆಯ ಸಂಪಾದಕರಾದ ರಾಘವನ್‌ರವರು. ಅತಿಥಿಗಳ ಪಕ್ಕದಲ್ಲಿ ಅವರಿಗೆ ಕುರ್ಚಿಯನ್ನು ಹಾಕಲಾಗಿತ್ತು. ಆದರೆ ಅದರಲ್ಲಿ ಕುಳಿತುಕೊಳ್ಳಲು ಇಚ್ಛಿಸದ ರಾಘವನ್‌ರವರು ತಮಗಾಗಿ ಹಾಕಿದ್ದ ಕುರ್ಚಿಯನ್ನು ತಾವೇ ಎತ್ತಿ ದೂರಕ್ಕೆ ಇಟ್ಟುಕೊಂಡು ಸಂವಾದವನ್ನು ನಡೆಸಿದರು. ಇದಕ್ಕೆ ಕಾರಣವನ್ನು ಕೇಳಿದ ನಮ್ಮ ಕಾರ್ಯಕರ್ತರಿಗೆ ಅವರು ಹೇಳಿದ್ದು: "ನಮ್ಮ ಪತ್ರಿಕೆಯಲ್ಲಿ ನಾನು ಅತಿಥಿಗಳ ಜತೆಗಿರುವ ಫೋಟೋ ಬರಬಾರದು!".

ರಾಘವನ್ ಅವರು ನಿಧನರಾದ ಸುದ್ದಿ ಈಗ ವಿಜಯ ಕರ್ನಾಟಕದ ಮುಖಪುಟದಲ್ಲಿ ಅವರ ಭಾವಚಿತ್ರದೊಂದಿಗೆ ಪ್ರಕಟವಾಗಿದೆ. ನಾಡಿನ ದೊಡ್ಡ ಪತ್ರಿಕೆಯ ಸಂಪಾದಕರಾಗಿ ಅವರು ಕೆಲಸ ಆರಂಭಿಸಿದಾಗಿನಿಂದಲೂ ಅವರ ಸುದ್ದಿ ಅಷ್ಟಾಗಿ ಬಂದಿರಲಿಲ್ಲ. ಇದೇ ಮೊದಲ ಸುದ್ದಿ ಹಾಗೂ ಕೊನೆಯ ಸುದ್ದಿ. ಪತ್ರಕರ್ತರಾದವರು ಹೇಗಿರಬೇಕು, ಹೇಗೆ ನಡೆದುಕೊಳ್ಳಬೇಕೆಂಬುದಕ್ಕೆ ಅವರೊಂದು ಜೀವಂತ ಉದಾಹರಣೆಯಾಗಿದ್ದರು. ಇಂಥ ತತ್ವನಿಷ್ಠ, ಸಜ್ಜನ ಪತ್ರಕರ್ತರಾಗಿದ್ದ ರಾಘವನ್ ಅವರು ನಮ್ಮ ಈ ಅಂಕಣ ಬರಹದ ವಿಷಯವಾಗುತ್ತಾರೆಂದು ಎಣಿಸಿರಲಿಲ್ಲ.

ರಾಘವನ್ ಅವರ ಅಗಲಿಕೆಯಿಂದ ದುಃಖತಪ್ತರಾದ ಅವರ ಕುಟುಂಬವರ್ಗದವರಿಗೆ ಮತ್ತು ಅವರ ಆತ್ಮೀಯ ಸ್ನೇಹಿತರಿಗೆ ಎಷ್ಟೇ ಸಾಂತ್ವನದ ಮಾತುಗಳನ್ನು ಹೇಳಿದರೂ ದುಃಖ ಒತ್ತರಿಸಿ ಬರುವುದು ಸಹಜ. ಈ ವರ್ಷದ ಯುಗಾದಿ ಅವರಿಗೆ ಸಂತಸದ ದಿನವಾಗಿಲ್ಲ. ಕಾಲವೇ ಅವರ ದುಃಖವನ್ನು ಉಪಶಮನಗೊಳಿಸಬೇಕು. ಚಿಂತಕರೊಬ್ಬರು ಹೇಳುವ ಈ ಕೆಳಗಿನ ಮಾತು ಅವರ ಭವಿಷ್ಯ ಜೀವನಕ್ಕೆ ದಾರಿದೀಪವಾಗಲಿ:

> "If persons you love are stolen from you by death, the way to have them live on is to never stop loving them. Buildings burn, people die, but real love is forever."

**29.3.2012**

**ಶ್ರೀ ತರಳಬಾಳು ಜಗದ್ಗುರು**
**ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑